# 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**ಎಸ್ ಸಿ ನಂಃ- 46-15**

(ಪ್ರಾ.ಸಾ.-23 ಚಾ.ಸಾ.-27)

ತಾಃ 16-07-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು ಃ ಹೆಚ್ ಎಸ್ ಪರಮೇಶ್ವರ್

ತಂದೆಯ ಹೆಸರು ಃ ಹುಚ್ಚಪ್ಪ
ವಯಸ್ಸು ಃ 48 ವರ್ಷ
ಉದ್ಯೋಗ ಃ ಡಿ ವೈ ಎಸ್ ಪಿ , ಎ ಸಿ ಬಿ , ದಾವಣಗೆರೆ
ವಾಸ ಸ್ಥಳ ಃ ದಾವಣಗೆರೆ

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು 27.09.2013 ರಿಂದ 11.12.2015 ರವರೆಗೆ ನೆಲಮಂಗಲ ವೃತ್ತದ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ. ನೆಲಮಂಗಲ ವೃತ್ತದ ವ್ಯಾಪ್ತಿಗೆ ನೆಲಮಂಗಲ ನಗರ ಪೋಲೀಸ್ ಠಾಣೆ, ನೆಲಮಂಗಲ ಗ್ರಾಮಾಂತರ ಪೋಲೀಸ್ ಠಾಣ, ಮಾದನಾಯಕನಹಳ್ಳಿ ಪೋಲೀಸ್ ಠಾಣೆ, ತ್ಯಾಮಗೊಂಡ್ಲು ಪೋಲೀಸ್ ಠಾಣೆ ಹಾಗೂ ದಾಬಾಸ್‌ಪೇಟೆ ಪೋಲೀಸ್ ಠಾಣೆ ಬರುತ್ತವೆ.

ದಿನಾಂಕ 13.02.2014 ರಂದು ಈ ಪ್ರಕರಣದ ಕಡತವನ್ನು ಪಿ ಎಸ್ ಐ ರವಿ ರವರಿಂದ ಪಡೆದುಕೊಂಡು ಪರಿಶೀಲಿಸಿದೆನು. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಎ ಎನ್ ದಯಾನಿಧಿ ಮತ್ತು ಅಯೂಬ್‌ರವರನ್ನು

ಬರಮಾಡಿಕೊಂಡು ಅವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಮಹಜರನ್ನು ಬೆಳಗ್ಗೆ 10 ಗಂಟೆಯಿಂದ 11.30 ಗಂಟೆವರೆಗೆ ಜರುಗಿಸಿದೆನು. ಪಂಚನಾಮೆ ಕಾಲದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ರಕ್ತ ಮಿಶ್ರಿತ ಮಣ್ಣು , ರಕ್ತ ಹತ್ತಿದ ಹುಲ್ಲು ಕಡ್ಡಿ , ಮಾದರಿ ಮಣ್ಣು ಇವುಗಳನ್ನು ಪ್ಲಾಸ್ಟಿಕ್ ಡಬ್ಬದಲ್ಲಿ ಸಂಗ್ರಹಿಸಿದೆನು ಹಾಗೂ ಕೃತ್ಯ ನಡೆದ ಸ್ಥಳದಲ್ಲಿ ದೊರೆತ ರಕ್ತವಾಗಿದ್ದ ಬಿಳಿ ಪೈಜಾಮ್ ತುಂಡು, ಪಾಚಿ ಬಣ್ಣದ ಜರ್‌ಕಿನ್ ಹಾಗೂ ರಕ್ತ ಕಲೆಯಾಗಿರುವ ಒಂದು ನೀಲಗಿರಿ ಕಡ್ಡಿಯನ್ನು ಅಮಾನತ್ತುಪಡಿಸಿಕೊಂಡು ಅವುಗಳನ್ನು ಮಾಲು ಪಟ್ಟಿ ಸಂಖ್ಯೆ 15/14ಕ್ಕೆ ಅಳವಡಿಸಿಕೊಂಡೆನು. ನಂತರ ಕೃತ್ಯ ನಡೆದ ಸ್ಥಳದ ಕಚ್ಚಾ ನಕಾಶೆ ತಯಾರಿಸಿಕೊಂಡೆನು. ನಂತರ ಕೃತ್ಯ ನಡೆದ ಸ್ಥಳದಿಂದ ಸುಮಾರು 225 ಮೀಟರ್ ಅಂತರದಲ್ಲಿ ಎನ್.ಹೆಚ್–4 ರಸ್ತೆ ಬದಿಯಲ್ಲಿ ಕಂಟೇನರ್ ಲಾರಿ ನಿಂತಿತ್ತು. ಸದರಿ ಲಾರಿಯನ್ನು ಪರಿಶೀಲಿಸಲಾಗಿ ಲಾರಿ ನಂಬರ್ ಹೆಚ್ ಆರ್ 55 ಜೆ 5724 ಅಂತ ಇತ್ತು. ಸದರಿ ಲಾರಿ ಹತ್ತು ಟೈರಿನ ಕಂಟೇನರ್ ಲಾರಿ ಆಗಿತ್ತು. ಅದು ಚೇತಕ್ ಲಾಜಿಸ್ಟಿಕ್ಸ್‌ಗೆ ಸೇರಿದ ಲಾರಿಯಾಗಿತ್ತು. ನಂತರ ಸದರಿ ಲಾರಿಯ ಎಡ ಹಿಂಭಾಗದ ಆಕ್ಸಲ್‌ಗೆ ಜಾಕ್ ಹಾಕಿ ಕಲ್ಲು ಇಟ್ಟು ಎಡಭಾಗದ ನಾಲ್ಕೂ ಟೈರ್‌ಗಳನ್ನು ಬಿಚ್ಚಿಕೊಂಡು ಹೋಗಿರುವ ನಿಶಾನೆ ಕಂಡು ಬಂದಿತ್ತು. ಲಾರಿ ಹಿಂಭಾಗದ ಟೂಲ್ಸ್ ಬಾಕ್ಸ್ ತೆಗೆದಿದ್ದು , ಟೂಲ್ಸ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಸದರಿ ಲಾರಿಯ ಎಡಭಾಗದಲ್ಲಿ ಟೈರ್ ಬಿಚ್ಚಿರುವ ಜಾಗದಿಂದ 5 ಅಡಿ ಅಂತರದಲ್ಲಿ ಮೇಲೆ ಹೇಳಿದ ಒಂದು ನೀಲಗಿರಿ ಕಡ್ಡಿ ಬಿದ್ದಿದ್ದು ಅದರಲ್ಲಿ ರಕ್ತದ ಕಲೆಯಾಗಿತ್ತು. ಸದರಿ ನೀಲಗಿರಿ

ಕಡ್ಡಿ ಎರಡೂವರೆ ಅಡಿ ಉದ್ದ ಹಾಗೂ ಒಂದು ಇಂಚು ದಪ್ಪ ಇತ್ತು. ನಂತರ ಸದರಿ ನೀಲಗಿರಿ ಕಡ್ಡಿ ಮತ್ತು ಲಾರಿಯನ್ನು ಅಮಾನತ್ತುಪಡಿಸಿಕೊಂಡೆನು. ಎರಡೂ ಸ್ಥಳಗಳಲ್ಲಿ ಒಟ್ಟಾಗಿ ಒಂದೇ ರನ್ನಿಂಗ್ ಮಹಜರ್ ಜರುಗಿಸಿರುತ್ತೇನೆ. ಈಗ ನನಗೆ ತೋರಿಸುತ್ತಿರುವ ನಿಪಿ-8 ಸದರಿ ಮಹಜರ್ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ನಿಪಿ-8 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ಮಹಜರ್ ಕಾಲಕ್ಕೆ ಲಾರಿಯ ಫೋಟೋಗಳನ್ನು ತೆಗೆಯಿಸಿದ್ದೆನು. ಈಗ ನನಗೆ ತೋರಿಸುತ್ತಿರುವ ಕಡತದಲ್ಲಿನ ಪಿ ಎಫ್ ನಂ. 15/14 ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಾಲುಪಟ್ಟಿಯನ್ನು ನಿ.ಪಿ-43 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-43(ಎ) ಎಂದು ಗುರುತಿಸಲಾಯಿತು. ಪಿ.ಎಫ್ ನಂ. 15/14 ರಲ್ಲಿ ಕಾಣಿಸಿರುವ ಮಾಲುಗಳನ್ನು ತೋರಿಸಿದಲ್ಲಿ ಗುರುತಿಸುತ್ತೇನೆ. ಈಗ ನನಗೆ ತೋರಿಸುತ್ತಿರುವ ಮು.ಮಾ-1 ರಿಂದ 5 ನೋಡುತ್ತಿದ್ದು ಇವುಗಳನ್ನೇ ನಿಪಿ-8 ಮಹಜರ್‌ನಡಿ ವಶಪಡಿಸಿಕೊಂಡಿದ್ದೆನು.

ಈಗ ನನಗೆ ತೋರಿಸುತ್ತಿರುವ ನಿಪಿ-5 ರಿಂದ 7 ಲಾರಿಯ ಫೋಟೋಗಳನ್ನು ನೋಡುತ್ತಿದ್ದು ಇವುಗಳನ್ನೇ ನಿಪಿ-8 ಮಹಜರ್ ಕಾಲಕ್ಕೆ ತೆಗೆಯಿಸಿದ್ದು ಸದರಿ ಲಾರಿಯನ್ನೇ ಅಮಾನತ್ತುಪಡಿಸಿಕೊಂಡಿದ್ದೇನೆ.

ನಿಪಿ-8 ಮಹಜರ್ ನಂತರ ನಾನು ತುಮಕೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಶವಾಗಾರದಲ್ಲಿದ್ದ ಮೊಹಮದ್ ಇಸಾಕ್ ಈತನ ಶವಪಂಚನಾಮೆಯನ್ನು ಪಂಚರಾದ ನವೀನ್ ಶರ್ಮ , ಸೂರಜ್ ಬಾನು ,

ಜಾಕಿರ್ ಹುಸೇನ್ ರವರನ್ನು ಬರಮಾಡಿಕೊಂಡು ಅವರಿಗೆ ಫಾರಂ ನಂ.144 ನೋಟೀಸ್ ಜಾರಿ ಮಾಡಿ ಮದ್ಯಾಹ್ನ 12.30 ರಿಂದ 3 ಗಂಟೆವರೆಗೆ ಶವ ಪಂಚನಾಮೆಯನ್ನು ಜರುಗಿಸಿದ್ದೆನು. ಶವ ಮಹಜರ್ ಕಾಲಕ್ಕೆ ಶವದ ಮೈಮೇಲೆ ಕಂಡು ಬಂದ 18 ಗಾಯಗಳನ್ನು ಶವ ಮಹಜರ್‌ನಲ್ಲಿ ನಮೂದಿಸಿದ್ದೇನೆ. ಮೃತನ ಮೈಮೇಲೆ ಹರಿದಿರುವ ಬಿಳಿ ತುಂಬು ತೋಳಿನ ಶರ್ಟ್, ಬಿಳಿ ಬಣ್ಣದ ಪೈಜಾಮ ಹರಿದಿದ್ದು , ಒಂದು ಕಾಫಿ ಕಲರ್ ಕಾಚಾ ಇತ್ತು. ಶವ ಮಹಜರ್ ಕಾಲಕ್ಕೆ ಮೃತನ ಮಾವ ತಯೂಬ್ ಖಾನ್ ಮತ್ತು ಭರತ್ ಎನ್ನುವವರು ಮೃತನ ಶವ ಗುರುತಿಸಿದ್ದು ಅವರ ಹೇಳಿಕೆಗಳನ್ನು ಶವ ಮಹಜರ್ ಕಾಲಂ ನಂ. 9 ಮತ್ತು 10 ರಲ್ಲಿ ನಮೂದಿಸಿಕೊಂಡೆನು. ಈಗ ನನಗೆ ತೋರಿಸುತ್ತಿರುವ ನಿಪಿ-13 ಶವ ಮಹಜರ್ ನೋಟೀಸ್ ಮತ್ತು ನಿಪಿ-14 ಶವ ಮಹಜರ್ ನೋಡುತ್ತಿದ್ದೇನೆ. ಅವುಗಳಲ್ಲಿ ನನ್ನ ಸಹಿಗಳಿವೆ. ಶವ ಮಹಜರ್ ಕಾಲಕ್ಕೆ ಶವದ ಫೋಟೋಗಳನ್ನು ತೆಗೆಸಿರುತ್ತೇನೆ. ಈಗ ನನಗೆ ತೋರಿಸುತ್ತಿರುವ ನಿಪಿ-2 ರಿಂದ 4 ಸದರಿ ಶವದ ಪೋಟೋಗಳನ್ನು ನೋಡುತ್ತಿದ್ದೇನೆ. ಇವುಗಳನ್ನೇ ಶವ ಮಹಜರ್ ಕಾಲಕ್ಕೆ ತೆಗೆಯಿಸಿದಂತವು ಇರುತ್ತವೆ. ನಂತರ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಸಿಬ್ಬಂದಿ ವೀರಭದ್ರಪ್ಪನೊಂದಿಗೆ ವೈದ್ಯರ ಬಳಿ ಕಳುಹಿಸಿದೆನು. ನಂತರ ಆರೋಪಿತರ ಪತ್ತೆಗಾಗಿ ಕ್ರಮ ಕೈಗೊಂಡೆನು.

ನಂತರ ದಿನಾಂಕ 14-02-2014 ರಂದು ಈ ಪ್ರಕರಣದ ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿಕೊಡಲು ಲೋಕೋಪಯೋಗಿ ಇಲಾಖೆಗೆ ಪತ್ರ

ಬರೆದೆನು. ನಂತರ ಆರೋಪಿತರ ಪತ್ತೆಗಾಗಿ ಪಿ ಎಸ್ ಐ ದಾಬಾಸ್ ಪೇಟೆ ಮತ್ತು ಸಿಬ್ಬಂದಿಯವರಾದ ಮಲ್ಲಗುಂಡಿ ಮತ್ತು ನಾರಾಯಣಸ್ವಾಮಿ ಇವರನ್ನು ನೇಮಿಸಿದೆನು.

ದಿನಾಂಕ 25.02.2014 ರಂದು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಲಾರಿಯನ್ನು ಆರ್.ಸಿ ಹೋಲ್ಡರ್‌ನ ಎಸ್.ಪಿ.ಎ ಹೋಲ್ಡರ್ ಪಿ.ಕೋದಂಡನ್ ಇವರಿಗೆ ನೂರು ರೂಪಾಯಿಯ ಇಂಡೆಮ್ನಿಟಿ ಬಾಂಡ್ ಪಡೆದು ಬಿಡುಗಡೆ ಮಾಡಿದೆನು.

ದಿನಾಂಕ 28-02-2014 ರಂದು ಪಿ.ಎಂ.ಇ ರಿಪೋರ್ಟ್ ಮತ್ತು ಮೃತನ ಮೈಮೇಲಿನ ಬಟ್ಟೆಗಳನ್ನು ಕಳುಹಿಸಿಕೊಡಲು ವೈದ್ಯಾದಿಕಾರಿಗಳಿಗೆ ಮನವಿ ಮಾಡಿದೆನು.

ದಿನಾಂಕ 03.03.2014 ರಂದು ತುಮಕೂರಿನ ವೈದ್ಯಾದಿಕಾರಿಗಳು ಪಿ.ಸಿ ಬಸವರಾಜುರವರ ಮೂಲಕ ಹಾಜರುಪಡಿಸಿದ ಪಿ.ಎಂ.ಇ ರಿಪೋರ್ಟ್ ಮತ್ತು ಮೃತನ ಮೈಮೇಲಿನ ಸೀಲ್ ಮಾಡಿದ ವಸ್ತುಗಳನ್ನು ತಂದು ಹಾಜರುಪಡಿಸಿದಂತವುಗಳನ್ನು ಪಡೆದು ಅವುಗಳನ್ನು ಠಾಣಾ ಪಿ.ಎಫ್ ಸಂಖ್ಯೆ 28 / 14 ಕ್ಕೆ ನಮೂದಿಸಿಕೊಂಡೆನು. ಸದರಿ ಪಿ ಎಫ್ ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-44 ಎಂದು ಹಾಗೂ ನಿಪಿ-44 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-44(ಎ) ಎಂದು ಗುರುತಿಸಲಾಯಿತು.

ನಂತರ ಈ ಪ್ರಕರಣದ ಆರೋಪಿತರು ದೊಡ್ಡಬೆಳವಂಗಲ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 48 / 14 ರಲ್ಲಿ ನ್ಯಾಯಾಂಗ ಬಂಧನದಲ್ಲಿರುವರೆಂದು ಪಿ ಎಸ್ ಐ ದೊಡ್ಡಬೆಳವಂಗಲ ಪೋಲೀಸ್ ಠಾಣೆಯವರು ತಿಳಿಸಿದರು. ಸದರಿ ಆರೋಪಿತರು ದಾಬಾಸ್‌ಪೇಟೆ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 35 / 14 ಮತ್ತು ಈ ಪ್ರಕರಣದ ಕೃತ್ಯದಲ್ಲಿ ಭಾಗಿಯಾಗಿರುವರೆಂದು ವಿಚಾರಣೆ ಕಾಲಕ್ಕೆ ತಿಳಿದು ಬಂದಿದೆ ಅಂತ ಪಿ.ಎಸ್.ಐ ರವರು ತಿಳಿಸಿದ್ದರು ಹಾಗೂ ಯೂ.ಟಿ.ಪಿ ನಂಬರ್‌ಗಳನ್ನು ಸಹ ತಿಳಿಸಿದ್ದರು. ಸದರಿ ಯೂ.ಟಿ.ಪಿ ನಂಬರ್‌ಗಳನ್ನು ಪರಿಶೀಲಿಸಿದಾಗ ಈ ಪ್ರಕರಣದಲ್ಲಿನ ಐದೂ ಜನ ಆರೋಪಿತರು ಈಗಾಗಲೇ ನ್ಯಾಯಾಂಗ ಬಂಧನದಲ್ಲಿರುವರು ಎಂದು ದೃಡಪಡಿಸಿಕೊಂಡು ಸದರಿಯವರ ವಿರುದ್ದ ಬಾಡಿ ವಾರೆಂಟ್ ಹೊರಡಿಸಲು ನೆಲಮಂಗಲ ಜೆ ಎಂ ಎಫ್ ಸಿ ನ್ಯಾಯಾಲಯಕ್ಕೆ ಕೋರಿಕೆ ಪತ್ರ ಸಲ್ಲಿಸಿದೆನು. ನ್ಯಾಯಾಲಯದಿಂದ ಬಾಡಿ ವಾರೆಂಟ್ ಪಡೆದುಕೊಂಡು ಪರಪ್ಪನ ಅಗ್ರಹಾರ ಜೈಲಿಗೆ ಪೂರೈಸಿದೆನು.

ದಿನಾಂಕ 25-03.2014 ರಂದು ದೊಡ್ಡಬೆಳವಂಗಲ ಪೋಲೀಸ್ ಠಾಣೆಯ ಹೆಚ್.ಸಿ.ಮುನಿರಾಜುರವರು ದೊಡ್ಡಬೆಳವಂಗಲ ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯ 48/14 ರಲ್ಲಿ ದಾಖಲಾತಿಗಳನ್ನು ಹಾಗೂ ಕೃತ್ಯಕ್ಕೆ ಉಪಯೋಗಿಸಿದ ಮೂರು ಸ್ಟಿಕರ್ ಕಟ್ ಮಾಡುವ ಬ್ಲೇಡ್‌ಗಳನ್ನು ಮತ್ತು ಒಂದೂವರೆ ಅಡಿ ಉದ್ದದ ಕಬ್ಬಿಣದ ಕೊಳವೆ ರಾಡು ಇದ್ದ ಪ್ಯಾಕ್ ಮಾಡಿದ ವಸ್ತುಗಳನ್ನು ಮತ್ತು ಆರೋಪಿತರು ಕೊಲೆ ಮಾಡಿದ ಸ್ಥಳ ತೋರಿಸಿದ ವಿಡಿಯೋ ಸಿಡಿಯನ್ನು ತಂದು

ಹಾಜರುಪಡಿಸಿದ್ದು ಅವುಗಳನ್ನು ಸ್ವೀಕರಿಸಿ ಠಾಣಾ ಮಾಲು ಪಟ್ಟಿ ಸಂಖ್ಯೆ 40/14 ಕ್ಕೆ ಅಳವಡಿಸಿಕೊಂಡೆನು. ಈಗ ನನಗೆ ತೋರಿಸುತ್ತಿರುವ ಸದರಿ ಮಾಲು ಪಟ್ಟಿ ಸಂಖ್ಯೆ 40 / 14 ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-45 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-45(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷೀದಾರರ ವಿನಂತಿಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.